SRI S. B. NAGARAL.—Yes.

† SMT VIJAYA DESAI.—Will it be possible for the Government to lay foundation stone before December 1976 ?

SRI S. B. NAGARAL.—For laying of foundation we have to consider. But a sum of Rs. 1 lakh has been provided for the construction of this Bridge.

Establishment of Medical Centre for each Group of Villages

193. SRI B G BANAKAR (Hirekerur).—Will the Minister for Health be pleased to state :—

(*a*) the total number of Medical Doctors working in the State in different services ;

(*b*) the total number of Medical Doctors in different services in-

(1) Bangalore Corporation area ;

(2) Mysore Corporation area ;

(3) Hubli-Dharwar Corporation area ;

(*c*) whether they intend to establish one Medical Centre for every group of Villages consisting of 10 thousand population in the rural area of the State ?

SRI SUBASH ASTURE (Minister of State for Major and Medium Irrigation) On behalf of. SRI H. SIDDAVEERAPPA (Minister for Health).

(*a*) Teaching Cadre ... 697
General Cadre ... 2951

(*b*) (1) 725.
(2) 255.
(3) 217.

(*c*) No.

ಶ್ರೀ ಬಿ. ಜಿ. ಬಣಕರ್.—ಇದರಲ್ಲಿ 10 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ, 20 ಸಾವಿರಕ್ಕೆ, 30 ಸಾವಿರಕ್ಕೆ ಒಂದರಂತೆ ಕೊಡುತ್ತೀರಾ ? ರಾಜ್ಯದಲ್ಲಿ ಕೆಲವು ಕಡೆ 50 ಸಾವಿರ ಜನಸಂಖ್ಯೆ ಇರುವ ಪ್ರದೇಶಗಳಲ್ಲೂ ಆಸ್ಪತ್ರೆ ಇಲ್ಲ. ಕಡ್ಡಾಯವಾಗಿ ಎಷ್ಟು ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ಕೊಡುತ್ತೀರಿ ಮತ್ತು ಎಷ್ಟು ವರ್ಷದೊಳಗೆ ಕೊಡುತ್ತೀರಿ ?

† Asterisks indicate that remarks or speeches have not been revised by the member concerned.

† ಶ್ರೀ ಸುಭಾಷ್ ಅಸ್ತೂರೆ.—15 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ಸರ್ಕಾರ ಆಗಲೇ ನಿರ್ಣಯ ತೆಗೆದುಕೊಂಡಿದೆ. ಆದರ ಪ್ರಕಾರ ಕಳೆದ 2 3 ವರ್ಷಗಳಲ್ಲಿ 20 ಆಸ್ಪತ್ರೆಗಳನ್ನು ಮಂಜೂರ್ಮಾಡಿದ್ದೇವೆ. ಇನ್ನು ದಿವಸದಲ್ಲಿ ಮಾಡಬಹುದೆಂಬುದನ್ನು ಹಣ ಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಆದಷ್ಟು ಬೇಗ 15 ಸಾವಿರ ಜನಸಂಖ್ಯೆ ಇರುವ ಪ್ರದೇಶಗಳಲ್ಲೆಲ್ಲ ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಗಿದೆ.

ಶ್ರೀ ಬಿ. ಜಿ. ಬಣಕರ್.—ನಮ್ಮ ಧಾರವಾಡ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ 50 ಸಾವಿರ ಜನಸಂಖ್ಯೆ ಇರುವ ಸರ್ಕಲ್ಲಿಗೂ ಸಹ ಒಂದು ಆಸ್ಪತ್ರೆ ಇಲ್ಲ. ಅದಕ್ಕೋಸ್ಕರ ಮೊದಲು 50 ಸಾವಿರ ಜನಸಂಖ್ಯೆ ಇರುವ ಪ್ರದೇಶಕ್ಕೆ ಒಂದರಂತೆ ಕಡ್ಡಾಯವಾಗಿ ಕೊಡಿ, ನಂತರ 30 ಸಾವಿರಕ್ಕೆ ಒಂದಂರಂತೆ ಕೊಡಿ, ಆಮೇಲೆ 15 ಸಾವಿರಕ್ಕೆ ಒಂದರಂತೆ ಕೊಡಿ. ಕೊನೇ ಪಕ್ಷ 50 ಸಾವಿರ ಜನಸಂಖ್ಯೆ ಇರುವ ಪ್ರದೇಶಗಳಿಗೆ ಒಂದೊಂದು ಆಸ್ಪತ್ರೆಗಳನ್ನು ಕಡ್ಡಾಯವಾಗಿ ಕೊಡಲೇಬೇಕು.

ಶ್ರೀ ಸುಭಾಷ್ ಅಸ್ತೂರೆ.—ನಿಮ್ಮ ಕಡೆಯ ಎಂ.ಎಲ್.ಎ. ಅವರು ಕೇಳಿದ ಮೇಲೆ 15 ಸಾವಿರ ಜನಸಂಖ್ಯೆ ಇರುವ ಕಡೆಯಲ್ಲೆಲ್ಲ ಸಬ್ ಸೆಂಟರ್‌ಗಳನ್ನು ಮಾಡುತ್ತಿದ್ದೇವೆ. ಅದೇ ರೀತಿ ನಿಮ್ಮ ಕಡೆ ಎಲ್ಲಿ 15 ಸಾವಿರ ಜನಸಂಖ್ಯೆ ಇದೆ ಅಂಥ ಪ್ರದೇಶಗಳನ್ನು ಹೇಳಿ ಆಲ್ಲಿಯೂ ಮಾಡಿ ಕೊಡೋಣ.

ಶ್ರೀ ಬಿ. ಜಿ. ಬಣಕರ್.—ಕೆಲವು ತಾಲ್ಲೂಕು ಅಭಿವೃದ್ಧಿ ಮಂಡಲಗಳು ಆಸ್ಪತ್ರೆಗಳನ್ನು ನಡೆಸುತ್ತಿವೆ, ಆದರೆ ಅವುಗಳಿಗೆ ಔಷಧಿ ಕೊಳ್ಳುವುದಕ್ಕೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿರುವುದಿಲ್ಲ. ತಾಲ್ಲೂಕು ಬೋರ್ಡುಗಳು ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳನ್ನು ನಡೆಸುತ್ತಿವೆ ಅವುಗಳನ್ನು ನೀವು ಏಕೆ ತೆಗೆದುಕೊಳ್ಳಬಾರದು ?

ಶ್ರೀ ಸುಭಾಷ್ ಅಸ್ತೂರೆ.—ತಾಲ್ಲೂಕು ಬೋರ್ಡಿನವರು ನಡೆಸುತ್ತಿರುವ ಎಲ್ಲಾ ಆಸ್ಪತ್ರೆ ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂಬ ಮನಸ್ಸು ಮಾಡಿದ್ದೆವು, ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನಿಸಿತು. ಮೊದಲು ಅವುಗ ಳನ್ನು ಪ್ರಾರಂಭ ಮಾಡುವಾಗ ಫಿನಾನ್ಸಿಯಲ್ ಪೊಸಿಷನ್ ಚೆನ್ನಾಗಿದೆ ಎಂದು ತಾಲ್ಲೂಕು ಬೋರ್ಡಿನವರು ಪ್ರಾರಂಭಿಸಿದ್ದಾರೆ, ಆದರ ನಲುವಾಗಿ ಅವರು ನಡೆಸಿಕೊಂಡು ಹೋಗಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ತಾಲ್ಲೂಕು ಮಟ್ಟದಲ್ಲರತಕ್ಕ ಆಸ್ಪತ್ರೆಗಳಲ್ಲಿ ಸಾಕಷ್ಟು ಮಂದಿ ಡಾಕ್ಟರುಗಳು ಇಲ್ಲ, ಸಿಬ್ಬಂದಿ ಇಲ್ಲ, ಇದರಿಂದ ಜನತೆಗೆ ತುಂಬಾ ತೊಂದರೆ ಯಾಗಿದೆ. ತಕ್ಷಣ ಈ ಸಿಬ್ಬಂದಿಯನ್ನು ಒದಗಿಸಿ ಗ್ರಾಮಾಂತರ ಪ್ರದೇಶದ ಜನಗಳಿಗೆ ಸಹಾಯ ಮಾಡುತ್ತೀರಾ ?

ಶ್ರೀ ಸುಭಾಷ್ ಅಸ್ತೂರೆ.—ಅದು ಪ್ರತ್ಯೇಕವಾಗಿದೆ. ಇದನ್ನು ಬೇರೆಯವರಿಂದ ಪರಿಶೀಲನೆ ಮಾಡಿಸೋಣ.

ಶ್ರೀ ಬಿ. ಜಿ. ಬಣಕರ್.—ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಆಸ್ಪತ್ರೆಗಳನ್ನು ತಾವು ವಹಿಸಿಕೊಳ್ಳಬೇಕೆಂದು ತೀರ್ಮಾನಕ್ಕೆ ಬಂದಿದ್ದೀರಿ. ಆ ಪ್ರಕಾರ ಇಲ್ಲಿಯವರೆಗೆ ಎಷ್ಟು ಆಸ್ಪತ್ರೆ ಗಳನ್ನು ವಹಿಸಿಕೊಂಡಿದ್ದೀರಿ ಮತ್ತು 1976ನೇ ಇಸವಿ ಡಿಸಂಬರ್ ಅಂತ್ಯದೊಳಗೆ ಎಷ್ಟು ಆಸ್ಪತ್ರೆ ಗಳನ್ನು ವಹಿಸಿಕೊಳ್ಳುತ್ತೀರಿ ?

ಶ್ರೀ ಸುಭಾಷ್ ಅಸ್ತೂರೆ.—ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಎಲ್ಲಾ ಸರ್ಕಾರಿ ಆಸ್ಪತ್ರೆಗಳನ್ನು 30 ಬೆಡ್ ಆಸ್ಪತ್ರೆಗಳನ್ನಾಗಿ ಮಾಡಬೇಕೆಂದು ಪ್ರಪೋಸಲ್ ಇದೆ, ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ. ಜಿ. ಬಣಕರ್.—ಮುಂಬೈ ಕರ್ನಾಟಕದ ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಎಷ್ಟು ತಾಲ್ಲೂಕು ಬೋರ್ಡ್ ಆಸ್ಪತ್ರೆಗಳಿವೆ ? ಅವುಗಳ ಪೈಕಿ ಈಗಾಗಲೇ ಎಷ್ಟು ಆಸ್ಪತ್ರೆಗಳನ್ನು ವಹಿಸಿಕೊಂಡಿದ್ದೀರಿ ಮತ್ತು 1976ನೇ ಡಿಸಂಬರ್ ಅಂತ್ಯದೊಳಗೆ ಎಷ್ಟನ್ನು ವಹಿಸಿಕೊಳ್ಳುತ್ತೀರಿ ?

SRI SUBHASH ASTHURE.—I want notice for that. It is not connected with this question.